ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 03-02-2002.

# *ಲಕ್ಷ್ಯ ಹಾಗೂ ಲಕ್ಷಣಗಳನ್ನು ಸಮಾನ ಮಾಡಿಕೊಳ್ಳಿರಿ, ಸರ್ವ ಖಜಾನೆಗಳಿಂದ ಸಂಪನ್ನರಾಗಿರಿ.*

(स्नेह की शक्ति द्वारा समर्थ बनो, सर्व आत्माओं को सुख-शान्ति की अंचली दो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸರ್ವ ಖಜಾನೆಗಳ ಮಾಲೀಕ ತನ್ನ ಖಜಾನೆಗಳಿಂದ ಸಂಪನ್ನರಾಗಿರುವ ಮಕ್ಕಳನ್ನು ನೋಡುತ್ತಾ ಇದ್ದಾರೆ. ಮಕ್ಕಳು ಪ್ರತಿಯೊಬ್ಬರೂ ಸರ್ವ ಖಜಾನೆಗಳಿಂದ ಸಂಪನ್ನರಾಗಿದ್ದಾರೆ. ಯಾವ ಮಕ್ಕಳು ಸಂಪನ್ನರಾಗಿರುತ್ತಾರೆಯೋ ಅವರ ಗುರುತುಗಳು ಸದಾ ಪ್ರಾಪ್ತಿ ಸ್ವರೂಪ, ತೃಪ್ತ ಅತ್ಮರಾಗಿ ಕಂಡು ಬರುತ್ತಾರೆ. ಏಕೆಂದರೆ ಸದಾ ಸಂಪನ್ನರಾಗಿರುವ ಕಾರಣ ಸದಾ ಖುಷಿಯಲ್ಲಿ ಇರುವುದು ಕಂಡು ಬರುತ್ತದೆ, ಆದ್ದರಿಂದ ಪ್ರತಿಯೊಬ್ಬರು ತಮ್ಮೊಂದಿಗೆ ತಾವೇ ಕೇಳಿಕೊಳ್ಳಬೇಕು ನನ್ನ ಬಳಿ ಎಷ್ಟು ಖಜಾನೆಗಳು ಜಮಾ ಆಗಿವೆ. ಈ ಅವಿನಾಶಿ ಖಜಾನೆಯು ವರ್ತಮಾನದಲ್ಲಿಯೂ ಪ್ರಾಪ್ತಿ ಆಗುತ್ತವೆ  ಹಾಗೂ ಭವಿಷ್ಯದಲ್ಲಿ ಅನೇಕ ಜನ್ಮಗಳವರೆಗೆ ತಮ್ಮ ಜೊತೆಯಲ್ಲಿ ಇರುತ್ತವೆ. ಈ ಖಜಾನೆ ಎಂದಿಗೂ ಸಮಾಪ್ತಿಯಾಗುವಂತಹದ್ದಲ್ಲ.  ಎಲ್ಲದಕ್ಕಿಂತಲೂ ಮೊಟ್ಟಮೊದಲ ಖಜಾನೆ - ಜ್ಞಾನದ ಖಜಾನೆ. ಈ ಜ್ಞಾನದ ಖಜಾನೆಯಿಂದ ಈ ಸಮಯದಲ್ಲಿಯೂ ನೀವೆಲ್ಲರೂ ಮುಕ್ತಿ ಮತ್ತು ಜೀವನ್ ಮುಕ್ತಿಯ ಅನುಭವವನ್ನು ಮಾಡಿಕೊಳ್ಳುತ್ತಿದ್ದೀರಿ. ಜೀವನದಲ್ಲಿ ಇರುತ್ತಲೂ, ಹಳೆಯ ಪ್ರಪಂಚದಲ್ಲಿ ಇರುತ್ತಲೂ, ತಮೋಗುಣಿ ವಾತಾವರಣದಲ್ಲಿ ಇರುತ್ತಲೂ,  ಜ್ಞಾನದಿಂದ, ಈ ವಾಯುಮಂಡಲದಿಂದ, ವೈಬ್ರೇಶನ್ ನಿಂದ ಅತೀತವಾಗಿ, ಮುಕ್ತರಾಗಿ ಇರುತ್ತಿದ್ದೀರಿ.

ಕಮಲ ಪುಷ್ಪ ಸಮಾನವಾಗಿ ಅತೀತವಾಗಿ ಮುಕ್ತಾತ್ಮರಾಗಿ ಇರುತ್ತಿದ್ದೀರಿ. ಅನಾಸಕ್ತರಾಗಿ ದುಃಖದಿಂದ ಚಿಂತೆಗಳಿಂದ, ಅಶಾಂತಿಯಿಂದ ಮುಕ್ತರಾಗಿದ್ದೀರಿ. ಜೀವನದಲ್ಲಿರುತ್ತಾ ದುಶ್ಚಟಗಳ ಬಂಧನದಿಂದ ಮುಕ್ತರಾಗಿದ್ದೀರಿ. ವ್ಯರ್ಥ ಸಂಕಲ್ಪಗಳ ಬಿರುಗಾಳಿಯಿಂದ ಮುಕ್ತರಾಗಿದ್ದೀರಾ? ಮುಕ್ತರಾಗಿದ್ದೀರಾ? ಎಲ್ಲರೂ ಕೈಯನ್ನು ಅಲುಗಾಡಿಸುತ್ತಿದ್ದಾರೆ. ಮುಕ್ತಿ ಹಾಗೂ ಜೀವನ್ಮುಕ್ತಿ ಈ ಜ್ಞಾನ ಖಜಾನೆಗಳ ಫಲವಾಗಿದೆ. ಪ್ರಾಪ್ತಿಯಾಗಿದೆ. ಒಂದುವೇಳೆ ವ್ಯರ್ಥ ಸಂಕಲ್ಪಗಳು ಬರಲು ಪ್ರಯತ್ನ ಮಾಡುತ್ತವೆ. ನಕಾರಾತ್ಮಕ ಸಂಕಲ್ಪಗಳು ಸಹ ಬರುತ್ತವೆ. ಆದರೆ ಜ್ಞಾನ ಅರ್ಥಾತ್ ತಿಳುವಳಿಕೆ ಆಗಿದೆ. ಅಂದಾಗ ವ್ಯರ್ಥ ಸಂಕಲ್ಪ ಹಾಗೂ ನಕಾರಾತ್ಮಕ ಸಂಕಲ್ಪಗಳ ಕರ್ತವ್ಯವು ಬರುವುದಾಗಿದೆ. ಹಾಗೂ ಜ್ಞಾನಿ ಆತ್ಮರ ಕರ್ತವ್ಯವು ಇವುಗಳಿಂದ ಮುಕ್ತ, ಅತೀತ ಹಾಗೂ ತಂದೆಗೆ ಪ್ರಿಯರಾಗಿರುವುದಾಗಿದೆ. ಆದುದರಿಂದ ಜ್ಞಾನದ ಖಜಾನೆ ಪ್ರಾಪ್ತಿಯಾಗಿದೆಯೇ ಎಂದು ಪರಿಶೀಲನೆ ಮಾಡಿಕೊಳ್ಳಿ. ಸಂಪನ್ನವಾಗಿದೆಯೇ? ಸಂಪನ್ನವಾಗಿದ್ದೀರಾ ಅಥವಾ ಕಡಿಮೆ ಇದೆಯೇ? ಒಂದುವೇಳೆ ಕಡಿಮೆ ಇದ್ದರೆ ಅದನ್ನು ಜಮಾ ಮಾಡಿಕೊಳ್ಳಿರಿ. ಹಾಗೆಯೇ ಖಾಲಿಯಾಗಿ ಇರಬೇಡಿ.

ಹಾಗೆಯೇ ಯೋಗದ ಖಜಾನೆಯಿಂದ ಸರ್ವ ಶಕ್ತಿಗಳ ಪ್ರಾಪ್ತಿಯಾಗುತ್ತದೆ. ಆದುದರಿಂದ ಯೋಗದ ಖಜಾನೆಯ ಮುಖಾಂತರ ಸರ್ವಶಕ್ತಿಗಳು ಜಮಾ ಆಗಿವೆಯೇ? ಎಂದು ನಿಮ್ಮನ್ನು ನೀವು ನೋಡಿಕೊಳ್ಳಿರಿ. ಒಂದುವೇಳೆ ಒಂದು ಶಕ್ತಿಯಾದರೂ ಕಡಿಮೆ ಇದ್ದರೆ ಅದು ಆ ಸಮಯಕ್ಕೆ ಮೋಸ ಮಾಡಿಬಿಡುತ್ತದೆ. ನಿಮ್ಮೆಲ್ಲರ ಸ್ವಮಾನವಾಗಿದೆ ಮಾಸ್ಟರ್ ಸರ್ವಶಕ್ತಿವಾನ್ ಎಂದು. ಕೇವಲ ಶಕ್ತಿವಂತರೆಂಬ ಸ್ವಮಾನವಲ್ಲ, ಸರ್ವ ಶಕ್ತಿವಾನ್. ಅರ್ಥಾತ್ ಸರ್ವ ಶಕ್ತಿಗಳ ಖಜಾನೆ ಯೋಗಬಲದಿಂದ ಜಮಾ ಆಗಿದೆಯೇ? ತುಂಬಿದೆಯೇ, ಪ್ರಾಪ್ತಿ ಸ್ವರೂಪರಾಗಿದ್ದೀರಾ ಅಥವಾ ಕಡಿಮೆ ಇದೆಯೇ? ಏಕೆ? ಈಗ ತಮ್ಮ ಕೊರತೆಯನ್ನು ತುಂಬಿಕೊಳ್ಳಬಹುದು ಇನ್ನೂ ಅವಕಾಶವಿದೆ. ಮುಂದೆ ಸಂಪನ್ನ ಮಾಡಿಕೊಳ್ಳುವ ಸಮಯವೂ ಸಮಾಪ್ತಿಯಾಗಿಬಿಡುವುದು, ಆಗ ಕೊರತೆಯು ಉಳಿದುಬಿಡುತ್ತದೆ. ಅದುದರಿಂದ ಈ ರೀತಿ ಪರಿಶೀಲನೆ ಮಾಡಿಕೊಳ್ಳಿರಿ. ಒಂದುವೇಳೆ ಯಾವುದದರೂ ಶಕ್ತಿಯ ಶೇಕಡವು (ಪರ್ಸೆಂಟೇಜ್) ಕಡಿಮೆ ಇದ್ದರೆ ಫುಲ್ ಪಾಸ್ ಎಂದು ನಿಮ್ಮನ್ನು ಕರೆಯುವುದಿಲ್ಲ, ಏಕೆಂದರೆ ಯಾರನ್ನೇ ಕೇಳಿದರೂ ಸಹ ನಿಮ್ಮೆಲ್ಲರ ಲಕ್ಷ್ಯವು ಫುಲ್ ಪಾಸ್ ಆಗುವುದಾಗಿದೆಯಲ್ಲವೆ? ಅಥವಾ ಅರ್ಧದಷ್ಟು ಪಾಸ್ ಆಗುವುದು ಆಗಿದೆಯೋ? ಎಲ್ಲರೂ ಹೇಳುತ್ತೀರಿ ನಾವು ಸೂರ್ಯವಂಶಿಯರಾಗುತ್ತೇವೆ. ಚಂದ್ರವಂಶಿಯವರಾಗುವುದಿಲ್ಲ. ಚಂದ್ರವಂಶಿ ಆಗುವಿರಾ? ಬಾಪ್‌ದಾದಾರವರು ತುಂಬಾ ಉತ್ತಮವಾದ ಸಿಂಹಾಸನವನ್ನು ಕೊಡುವರು. ಹಾಗಾದರೆ ಚಂದ್ರವಂಶಿಯರಾಗುವಿರಾ? ಭಾರತೀಯ ಮಕ್ಕಳು ಸೂರ್ಯವಂಶಿಯರಾಗಿಬಿಟ್ಟರೆ, ವಿದೇಶದವರು ಚಂದ್ರವಂಶಿಯರಾಗುವಿರಾ? ಆಗುವುದಿಲ್ಲ ಅಲ್ಲವೇ? ಸೂರ್ಯವಂಶಿಯರಾಗಬೇಕು ಚಂದ್ರವಂಶಿಯರಾಗಬಾರದು ಸೂರ್ಯವಂಶಿಯರಾಗಲೇಬೇಕು. ಬಾಪ್‌ದಾದಾ ಚಿಟ್ ಚಾಟ್ ಮಾಡುತ್ತಾ ಇದ್ದಾರೆ. ಸೂರ್ಯವಂಶಿಯವರಾಗಲೇಬೇಕೆಂಬ ದೃಢ ನಿಶ್ಚಯವಿದೆ. ತಂದೆ ಹಾಗೂ ಸ್ವಯಂನ ಜೊತೆ ಪ್ರತಿಜ್ಞೆ ಮಾಡಿರುವಿರೆಂದಾಗ ಯಾವ ಶಕ್ತಿಯೂ ಕಡಿಮೆ ಆಗಬಾರದು. ಒಂದುವೇಳೆ ಸಮಸ್ಯೆ, ಪರಿಸ್ಥಿತಿಗನುಗುಣವಾಗಿ ಪರ್ಸೆಂಟೇಜ್ ಕಡಿಮೆಯಾಗಿಬಿಟ್ಟರೆ ಹದಿನಾಲ್ಕು ಕಲೆಯ ಚಂದ್ರವಂಶದವರಾಗಿಬಿಡುವಿರಿ. ಆದ್ದರಿಂದ ಬಾಪ್‌ದಾದಾರವರು ಈಗಿನ ಸಮಯದಲ್ಲಿ ನಾಲ್ಕೂ ಕಡೆಯ ಎಲ್ಲಾ ಮಕ್ಕಳ ದಿನಚರಿಯ ಲೆಕ್ಕ ಪತ್ರವನ್ನು, ರಿಜಿಸ್ಟರನ್ನು ಪರಿಶೀಲನೆ ಮಾಡುತ್ತಾ ಇದ್ದಾರೆ. ಬಾಪ್‌ದಾದಾರವರ ಬಳಿಯೂ ಸಹ ಮಕ್ಕಳ ಪ್ರತಿಯೊಬ್ಬರ ರಿಜಿಸ್ಟರ್ ಇದೆ. ಏಕೆಂದರೆ ಸಮಯದ ಅನುಸಾರವಾಗಿ ಯಾವಾಗಲೋ ಎನ್ನಬೇಡಿರಿ ಈಗಲೇ ಎನ್ನಿರಿ ಎಂದು ಬಾಪ್‌ದಾದಾರವರು ತಿಳುವಳಿಕೆ

ನೀಡುತ್ತಾ ಇದ್ದಾರೆ. ಯಾವಗಲಾದರೂ ಆಗಿಬಿಡುವೆನು, ಮಾಡಿಬಿಡುವೆನು ಅಗಲೇ ಪ್ರಾಪ್ತಿ ಸ್ವರೂಪರಾಗಬೇಕು ಎಂದು ಯೋಚಿಸಬೇಡಿರಿ. ಆಗಲೇಬೇಕು ಎಂದಲ್ಲ ಈಗಲೇ ಮಾಡಲೇಬೇಕು. ಸಮಯದ ಗತಿಯು ತೀವ್ರವಾಗುತ್ತಾ ಇದೆ. ಆದುದರಿಂದ ತಂದೆಯ ಸಮಾನರಾಗಬೇಕು ಫುಲ್ ಪಾಸ್ ಆಗಬೇಕು, ಹದಿನಾರು ಕಲಾ ಸಂಪನ್ನರಾಗಬೇಕೆಂಬ ಯಾವ ಲಕ್ಷ್ಯವನ್ನಾದರೆ ಇಟ್ಟುಕೊಂಡಿದ್ದೀರೋ ಆ ಲಕ್ಷ್ಯ ಹಾಗೂ ಪ್ರತ್ಯಕ್ಷ ಸ್ವರೂಪದ ಲಕ್ಷಣಗಳು ಸಮಾನವಾಗಿಬಿಡಬೇಕೆಂದು ಬಾಪ್‌ದಾದಾರವರು ಬಯಸುತ್ತಾರೆ. ಯಾವಾಗ ಲಕ್ಷ್ಯ ಹಾಗೂ ಲಕ್ಷಣಗಳೆರಡೂ ಸಮಾನವಾಗುವವೊ ಆಗಲೇ ಸಹಜವಾಗಿ ತಂದೆಯ ಸಮಾನರಾಗಿಬಿಡುವಿರಿ, ಆದುದರಿಂದ ನಿಮ್ಮನ್ನು ಪರಿಶೀಲನೆ ಮಾಡಿಕೊಳ್ಳಿರಿ - ಆಗಿಬಿಡುವುದು. ಆಗಿಯೇಬಿಡುವೆನು ಎಂದು ಹೇಳುವುದೂ ಸಹ ಸೋಮಾರಿತನವಾಗಿದೆ. ಏನು ಮಾಡಬೇಕಾಗಿದೆ. ಏನು ಆಗಬೇಕಾಗಿದೆ, ಏನು ಆಗಬೇಕೆಂಬ ಲಕ್ಷ್ಯವಿದೆಯೋ ಅದನ್ನು ಇಂದಿನಿಂದಲೇ ಮಾಡಬೇಕು. ಆಗಬೇಕು ಎನ್ನುವುದು ಬುದ್ಧಿಯಲ್ಲಿರಲಿ, ಯಾವಾಗಲಾದರೂ ಎನ್ನುವ ಶಬ್ದವನ್ನು ಉಪಯೋಗಿಸಬೇಡಿರಿ. ಈಗೀಗ ಮಾಡಬೇಕು ಎಂದು ನೆನಪಿಟ್ಟುಕೊಳ್ಳಿರಿ.

ಜ್ಞಾನ ಖಜಾನೆ, ಯೋಗದ ಖಜಾನೆ ಹಾಗೂ ಧಾರಣೆಯ ಖಜಾನೆಗಳಲ್ಲಿ ಸಂಪನ್ನರಾಗಬೇಕು. ಧಾರಣೆಗಳಿಂದ ಗುಣಗಳ ಖಜಾನೆಯು ಜಮಾ ಆಗಿಬಿಡುತ್ತದೆ. ಹೇಗೆ ಸರ್ವ ಶಕ್ತಿಗಳವೆಯೋ, ಗುಣಗಳಲ್ಲಿಯೂ ಹಾಗೆಯೇ ಸರ್ವ ಗುಣಗಳು ಇರಬೇಕು, ಕೇವಲ ಗುಣಗಳಲ್ಲ. ಸರ್ವ ಗುಣಗಳೂ ಇರಬೇಕು. ಸರ್ವ ಗುಣಗಳು ಇವೆಯೇ ಅಥವಾ ಒಂದೆರಡು ಗುಣ ಕಡಿಮೆ ಇದ್ದರೂ ಏನು ನಷ್ಟವಾಗುತ್ತದೆ, ನಡೆಯುತ್ತದೆ ಎಂದು ಯೋಚನೆ ಮಾಡುತ್ತಿದ್ದೀರಾ? ನಡೆಯುವುದಿಲ್ಲ. ಆದುದರಿಂದ ಸರ್ವ ಗುಣಗಳ ಜಮಾ ಇದೆಯೇ? ಯಾವ ಯಾವ ಗುಣಗಳ ಲೋಪವಿದೆಯೋ ಅದನ್ನು ಪರಿಶೀಲನೆ ಮಾಡಿಕೊಂಡು ಸಂಪನ್ನವಾಗಿರಿ.

ಹಾಗೆಯೇ ನಾಲ್ಕನೇ ಸಬ್ಜೆಕ್ಟ್ ಸೇವೆಯಾಗಿದೆ. ಸೇವೆಯ ಮೂಲಕ ಎಲ್ಲರಿಗೂ ಯಾವ ಅನುಭವ ಇದೆಯೆಂದರೆ ಯಾವಾಗಲಾದರೂ ಮನಸಾ ಸೇವೆ ಅಥವಾ ವಾಚಾ ಸೇವೆ ಅಥವಾ ಕರ್ಮದ ಮೂಲಕ ಸೇವೆ ಮಾಡಿದರೆ ಅದರ ಫಲವಾಗಿ ಆತ್ಮಿಕ ಖುಷಿಯು ಪ್ರಾಪ್ತಿಯಾಗುತ್ತದೆ ಎಂದು. ಆದುದರಿಂದ ಸೇವೆಯ ಮೂಲಕ ಖುಷಿಯು ಎಷ್ಟರ ಮಟ್ಟಿಗೆ ಅನುಭೂತಿ ಆಗುತ್ತದೆ ಎನ್ನುವುದನ್ನು ನೋಡಿಕೊಳ್ಳಿರಿ. ಒಂದುವೇಳೆ ಸೇವೆ ಮಾಡಿದರೂ ಸಹ ಖುಷಿ ಇಲ್ಲದಿದ್ದರೆ ಆ ಸೇವೆ ಯಥಾರ್ಥ ಸೇವೆಯಾಗುವುದಿಲ್ಲ. ಆ ಸೇವೆಯಲ್ಲಿ ಏನೋ ಕೊರತೆ ಇದೆ. ಆದ್ದರಿಂದ ಖುಷಿ ಪ್ರಾಪ್ತಿಯಾಗುವುದಿಲ್ಲ. ಸೇವೆಯ ಅರ್ಥವಾಗಿದೆ - ಆತ್ಮವು ತನ್ನನ್ನು ಹರ್ಷಿತವಾಗಿ ಅರಳಿರುವ ಆತ್ಮಿಕ ಗುಲಾಬಿ, ಖುಷಿಯ ಉಯ್ಯಾಲೆಯಲ್ಲಿ ಆಡುವಂತೆ ಅನುಭವ ಮಾಡುವರು. ಆದುದರಿಂದ ಏನು ಪರಿಶೀಲನೆ ಮಾಡಿಕೊಳ್ಳಬೇಕೆಂದರೆ - ಇಡೀ ದಿನ ಸೇವೆ ಮಾಡಿದರೂ, ಇಡೀ ದಿನದ ಸೇವೆಯ ಹೋಲಿಕೆಯಲ್ಲಿ ಅಷ್ಟು ಖುಷಿಯು ಆಯಿತೋ ಅಥವಾ ಈ ರೀತಿ ಯೋಚನೆಯ ವಿಚಾರಗಳು ನಡೆಯುತ್ತಾ ಇದ್ದವೋ - ಇದಲ್ಲ ಅದು, ಅದಲ್ಲ ಇದು ಎಂದು ಯೋಚಿಸುತ್ತಿದ್ದೀರೋ! *ನಿಮ್ಮ ಖುಷಿಯ ಪ್ರಭಾವವು ಮೊದಲನೆಯದಾಗಿ ನಿಮ್ಮ ಸೇವೆಯ ಸ್ಥಾನದ ಮೇಲೆ, ಎರಡನೆಯದಾಗಿ ಸೇವೆಯ ಜೊತೆಗಾರರ ಮೇಲೆ, ಮೂರನೆಯದಾಗಿ ಯಾವ ಆತ್ಮರ ನಿಮಿತ್ತ ಸೇವೆ ಮಾಡಿದ್ದಿರೋ ಆ ಆತ್ಮರು ಈ ವಾಯುಮಂಡಲದಲ್ಲಿ ಖುಷಿಯಾಗಿಬಿಡಬೇಕು. ಇದು ಸೇವೆಯ ಖಜಾನೆಯ ಖುಷಿಯ ಪ್ರಾಪ್ತಿಯಾಗಿದೆ.*

ಮತ್ತೊಂದು ವಿಚಾರ ನಾಲ್ಕು ಸುಜ್ಜೆಕ್ಟ್‌ಗಳಂತೂ ಬಂದುಬಿಟ್ಟವು. ಇನ್ನೊಂದು ಸಂಬಂಧ ಸಂಪರ್ಕ ಅದು ಕೂಡ ಅಗತ್ಯವಾಗಿದೆ ಏಕೆ? ಹಲವು ಮಕ್ಕಳು ಏನೆಂದುಕೊಂಡಿದ್ದಾರೆಂದರೆ ಬಾಪ್‌ದಾದಾರವರೊಂದಿಗಂತೂ ಸಂಬಂಧವು ಇದ್ದೇ ಇದೆ. ಪರಿವಾರದಲ್ಲಿ ಇರಲಿ ಅಥವಾ ಇಲ್ಲದಿರಲಿ ಅದರಿಂದೇನು ನಷ್ಟವಾಗುತ್ತದೆ. ಬೀಜದೊಂದಿಗಂತೂ ಇದ್ದೇ ಇದೆ. ಆದರೆ ನೀವು ವಿಶ್ವದ ಮೇಲೆ ರಾಜ್ಯಭಾರ ಮಾಡಬೇಕಲ್ಲವೆ. ಆದುದರಿಂದ ರಾಜ್ಯದಲ್ಲಿ ಸಂಬಂಧದಲ್ಲಿ ಬರಲೇಬೇಕಾಗುತ್ತದೆ. ಆದ್ದರಿಂದ ಪರಿವಾರದ ಸಂಬಂಧ ಸಂಪರ್ಕದಲ್ಲಿ ಬರಲೇಬೇಕಾಗುತ್ತದೆ. ಸಂಬಂಧ ಸಂಪರ್ಕದಲ್ಲಿನ ಯಥಾರ್ಥ ಖಜಾನೆಯಾಗಿ ಆಶೀರ್ವಾದಗಳು ದೊರೆಯುತ್ತದೆ. ಸಂಬಂಧ ಸಂಪರ್ಕದಲ್ಲಿ ಬಾರದಿದ್ದರೆ ಆಶೀರ್ವಾದಗಳ ಖಜಾನೆಯು ಜಮಾ ಆಗುವುದಿಲ್ಲ. ತಾಯಿ ತಂದೆಯರ ಆಶೀರ್ವದಗಳಂತೂ ಇವೆ. ಆದರೆ ಸಂಬಂಧ ಸಂಪರ್ಕದಲ್ಲಿಯೂ ಸಹ ಆಶಿರ್ವಾದಗಳನ್ನು ತೆಗೆದುಕೊಳ್ಳಬೇಕು. ಒಂದುವೇಳೆ ಆಶೀರ್ವಾದಗಳು ದೊರೆಯದಿದ್ದರೆ, ಆಶೀರ್ವಾದದ ಅನುಭವ ಆಗದಿದ್ದರೆ ಸಂಬಂಧ - ಸಂಪರ್ಕದಲ್ಲಿ ಏನೋ ಕೊರತೆಯಿದೆ ಎಂದು ತಿಳಿದುಕೊಳ್ಳಿರಿ. ಒಂದುವೇಳೆ ಯಥಾರ್ಥ ರೀತಿಯಲ್ಲಿ ಸಂಬಂಧ ಸಂಪರ್ಕವು ಇದ್ದರೆ ಆಶೀರ್ವಾದಗಳ ಅನುಭವವು ಆಗಬೇಕು ಹಾಗು ಆಶೀರ್ವಾದಗಳ ಅನುಭೂತಿಯು ಹೇಗೆ ಇರುತ್ತದೆ? ಎಂಬ ಅನುಭವಿಯಂತೂ ಆಗಿದ್ದೀರಲ್ಲವೆ! ಒಂದುವೇಳೆ ಸೇವೆಯಿಂದ ಆಶೀರ್ವಾದಗಳು ಪ್ರಾಪ್ತಿಯಾಗುತ್ತಿದ್ದರೆ ಸ್ವಯಂ ಹಗುರವಾಗಿರುವಿರಿ ಮತ್ತು ಸಂಬಂಧದಲ್ಲಿ ಬರುತ್ತಲೂ ಕಾರ್ಯ ಮಾಡುತ್ತಲೂ ಹಗುರವಾಗಿರುವಿರಿ. (ಕೆಮ್ಮು ಬರುತ್ತಿದೆ) ಬಾಜಾ (ದಾದಿಯ ಶರೀರ) ಸರಿಯಾಗಿಲ್ಲ ಆದರೂ ಬಾರಿಸಲೇಬೇಕಲ್ಲವೇ? ಆಶೀರ್ವಾದಗಳು ಲಭಿಸಿದರೆ ಸ್ವಯಂಸಹ ಸಂಬಂಧದಲ್ಲಿ ಬರುತ್ತಲೂ ಕಾರ್ಯವನ್ನು ಮಾಡುತ್ತಲೂ ಸದಾ ಹಗುರ ಅರ್ಥಾತ್ ನೆಮ್ಮದಿಯಿಂದ ಇರುತ್ತೀರಿ. ಭಾರಿಯಾಗಿರುವುದಿಲ್ಲ. ಮತ್ತು ನೀವು ಯಾರಿಗಾದರೆ ಸೇವೆಯನ್ನು ಮಾಡಿದ್ದೀರೋ ಅರ್ಥಾತ್ ಸಂಬಂಧ ಸಂಪರ್ಕದಲ್ಲಿ ಬಂದಿರುವವರು ಸಹ ಡಬಲ್ ಲೈಟ್ನ ಅನುಭವ ಮಾಡಿಕೊಳ್ಳುತ್ತಾರೆ. ಅವರು ಸಹ ನಿಮ್ಮ ಸಂಬಂಧದಲ್ಲಿ ಸದಾ ಹಗುರವಾಗಿ ಅರ್ಥಾತ್ ಈಸಿಯಾಗಿ ಇರುತ್ತಾರೆ. ಭಾರಿಯಾಗಿರುವುದಿಲ್ಲ ಎಂಬ ಅನುಭವವನ್ನು ಮಾಡಿಕೊಳ್ಳುತ್ತಾರೆ. ಸಂಬಂಧದಲ್ಲಿ ಬರೋಣವೋ ಅಥವಾ ಬೇಡವೋ ಎನ್ನುವ ಗೊಂದಲವಿರುವುದಿಲ್ಲ. ಆದರೆ ಆಶೀರ್ವಾದವು ದೊರೆಯುವ ಕಾರಣ ಎರಡೂ ಕಡೆ ನಿಯಮ ಪ್ರಮಾಣ ನಡೆದುಕೊಳ್ಳುವರು. ಹೇಗೆ ತುಂಬಾ ಸಿಹಿಯಾಗಿರುವ ಪದಾರ್ಥದ ಮೇಲೆ ಇರುವೆಗಳು ತುಂಬಾ ಮುತ್ತಿಕೊಳ್ಳುತ್ತವೆ ಎಂಬ ಲೋಕೋಕ್ತಿಯಂತೆ, ಇಷ್ಟೊಂದು ಸಾಧಾರಣರಾಗಬಾರದು, ಡಬಲ್ ಲೈಟ್ ಆಗಿರಬೇಕು. ಆದರೆ ಸಂಬಂಧ ಸಂಪರ್ಕವು ಅಸ್ಥಿರತೆಯನ್ನುಂಟು ಮಾಡುವಷ್ಟು ಸುಲಭವಾಗಬಾರದು, ಬಾಪ್‌ದಾದಾರವರು ನಿಮ್ಮ ಖಜಾನೆಯನ್ನು ಪರಿಶೀಲನೆ ಮಾಡಿಕೊಳ್ಳಿ ಎಂದು ಹೇಳುತ್ತಾ ಸಮಯವನ್ನೂ ಕೊಡುತ್ತಿದ್ದಾರೆ. ಇನ್ನೂ ಸಮಾಪ್ತಿಯ ಬೋರ್ಡ್ ಹಾಕಲ್ಪಟ್ಟಿಲ್ಲ. ಆದ್ದರಿಂದ ಪರಿಶೀಲನೆ ಮಾಡಿಕೊಳ್ಳುತ್ತಾ ಮುನ್ನಡೆಯುತ್ತಾ ಹೋಗಿರಿ.

ಬಾಪ್‌ದಾದಾರವರಿಗೆ ಮಕ್ಕಳ ಮೇಲೆ ಪ್ರೀತಿ ಇದೆಯಲ್ಲವೆ. ಮಕ್ಕಳು ಯಾರೂ ಹಿಂದೆ ಉಳಿದುಬಿಡಬಾರದು ಎಂಬುದು ಬಾಪ್‌ದಾದಾರವರ ವಿಚಾರವಾಗಿದೆ. ಮಕ್ಕಳು ಪ್ರತಿಯೊಬ್ಬರೂ ಒಬ್ಬರಿಗಿಂತ ಒಬ್ಬರು ಮುಂದೆ ಹೋಗಬೇಕು ಎನ್ನುವ ಇಚ್ಛೆ ಇದೆ. ನಡೆಯುತ್ತಾ ನಡೆಯುತ್ತಾ ದೇಹಾಭಿಮಾನವು ಬಂದುಬಿಡುತ್ತದೆ. ಸ್ವಮಾನ ಹಾಗೂ ದೇಹಾಭಿಮಾನ ಇವೆರಡಕ್ಕೂ ತುಂಬಾ ಅಂತರವಿದೆ. ದೇಹಾಭಿಮಾನಕ್ಕೆ ಕಾರಣ ಸ್ವಮಾನದ ಕೊರತೆಯಾಗಿದೆ. ಆದ್ದರಿಂದ ದೇಹಾಭಿಮಾನವನ್ನು ದೂರ ಮಾಡಿಕೊಳ್ಳುವ ಸಹಜವಾದ ಸಾಧನವು ಇದೇ. ದೇಹಾಭಿಮಾನವು ಒಂದು ಶಬ್ದದ

ಕಾರಣದಿಂದ ಬರುತ್ತದೆ. ಆ ಒಂದು ಶಬ್ದವು ಯಾವುದಾಗಿದೆ? (ನಾನು) ಒಳ್ಳೆಯದು ನಾನು, ನಾನು ಎಂದು ಎಷ್ಟು ಸಲ ಹೇಳುತ್ತಿರುತ್ತೀರಿ. ಇಡೀ ದಿನದಲ್ಲಿ ಎಷ್ಟು ಸಲ ನಾನು ಎಂದು ಹೇಳುತ್ತೀರಿ ಎನ್ನುವುದನ್ನು ಎಂದಾದರೂ ಗಮನವಿಟ್ಟು ಬರೆದಿಟ್ಟಿದ್ದೀರಾ? ಒಳ್ಳೆಯದು ಒಂದು ದಿನ ಬರೆದಿಟ್ಟುಕೊಳ್ಳಿರಿ. *ಪದೇ ಪದೇ ನಾನು ಎನ್ನುವ ಶಬ್ದವಂತೂ ಬಂದೇ ಬರುತ್ತದೆ. ಆದರೆ ನಾನು ಯಾರಾಗಿದ್ದೇನೆ? ಮೊದಲನೆ ಪಾಠವೇ, ನಾನು ಯಾರಾಗಿದ್ದೇನೆ ಎನ್ನುವುದಾಗಿದೆ. ಆದರೆ ದೇಹಾಭಿಮಾನದಲ್ಲಿ ನಾನು ಎಂದು ಹೇಳುತ್ತೀರಿ. ವಾಸ್ತವವಾಗಿ ನಾನು ಯಾರಾಗಿದ್ದೇನೆ ಆತ್ಮವೋ ಅಥವಾ ದೇಹವೋ? ಆತ್ಮವು ದೇಹವನ್ನು ಧಾರಣೆ ಮಾಡಿತೋ ಅಥವಾ ದೇಹವು ಆತ್ಮವನ್ನು ಧಾರಣೆ ಮಾಡಿತೋ? ಆತ್ಮವು ದೇಹವನ್ನು ಧಾರಣೆ ಮಾಡಿತು. ಹೀಗೆ ಹೇಳುವುದು ಸರಿಯಾಗಿದೆ. ಅತ್ಮವು ದೇಹವನ್ನು ಧಾರಣೆ ಮಾಡಿರುವ ಕಾರಣ ನಾನು ಯಾರಾಗಿದ್ದೇನೆ. ನಾನು ಆತ್ಮನಾಗಿದ್ದೇನೆ ಅಲ್ಲವೇ. ಆದುದರಿಂದ ದೇಹಾಭಿಮಾನವನ್ನು ದೂರ ಮಾಡುವ ಸಹಜ ಸಾಧನ ಏನಾಗಿದೆಯೆಂದರೆ ಯಾವ ಸಮಯದಲ್ಲಿ ನಾನು ಎನ್ನುವ ಶಬ್ದವನ್ನು ಹೇಳುತ್ತೀರೊ ಆಗ ನಾನು ಎಂತಹ ಆತ್ಮನಾಗಿದ್ದೇನೆ ಎನ್ನುವುದನ್ನು ನೆನಪು ಮಾಡಿಕೊಳ್ಳಿರಿ. ಆತ್ಮ ನಿರಾಕಾರವಾಗಿದೆ. ದೇಹವು ಸಾಕಾರವಾಗಿದೆ. ನಿರಾಕಾರ ಅತ್ಮವು ಸಾಕಾರ ದೇಹವನ್ನು ಧಾರಣೆ ಮಾಡಿರುವುದರಿಂದ ಎಷ್ಟು ಸಲ ನಾನು ನಾನು ಎನ್ನುವ ಶಬ್ದವನ್ನು ನುಡಿಯುತ್ತೀರೋ ಅಷ್ಟು ಸಮಯ ನಾನು ನಿರಾಕಾರ ಅತ್ಮನು ಸಾಕಾರ ಶರೀರದಲ್ಲಿ ಪ್ರವೇಶ ಮಾಡಿದ್ದೇನೆ ಎನ್ನುವುದನ್ನು ನೆನಪು ಮಾಡಿಕೊಳ್ಳಬೇಕು. ಯಾವಾಗ ನಿರಾಕಾರ ಸ್ಥಿತಿಯ ನೆನಪು ಇರುವುದೊ ಆಗ ಸ್ವತಃವಾಗಿಯೇ ನಿರಹಂಕಾರಿ ಆಗಿಬಿಡುವಿರಿ, ದೇಹಾಭಿಮಾನವು ಸಮಾಪ್ತಿಯಾಗಿಬಿಡುವುದು. ಅದೇ ಮೊದಲನೆ ಪಾಠ ನಾನು ಯಾರಾಗಿದ್ದೇನೆ ಎನ್ನುವುದನ್ನು ಸ್ಥಿತಿಯಲ್ಲಿಟ್ಟುಕೊಂಡು ನಾನು ಎಂತಹ ಆತ್ಮನಾಗಿದ್ದೇನೆ ಎಂದು. ಅತ್ಮನ ನೆನಪು ಬರುವುದರಿಂದ ನಿರಾಕಾರ ಸ್ಥಿತಿಯು ಪಕ್ಕಾ ಆಗಿಬಿಡುವುದು. ಎಲ್ಲಿ ನಿರಾಕಾರ ಸ್ಥಿತಿ ಇರುವುದೋ ಅಲ್ಲಿ ನಿರಹಂಕಾರಿ, ನಿರ್ವಿಕಾರಿ ಆಗಿಯೇ ಬಿಡುವಿರಿ.* ಆದ್ದರಿಂದ ನಾಳೆಯಿಂದ ಏನು ಬರೆದಿಟ್ಟುಕೊಳ್ಳಬೇಕೆಂದರೆ ನಾನು ಎಂಬ ಶಬ್ದವನ್ನು ಹೇಳುವಾಗ ಏನು ನೆನಪಿರುತ್ತದೆ ಹಾಗು ಎಷ್ಟು ಸಲ ನಾನು ಎಂಬ ಶಬ್ದವನ್ನು ಉಪಯೋಗಿಸುತ್ತೀರೋ ಅಷ್ಟು ಸಲ ನಿರಾಕಾರಿ, ನಿರಹಂಕಾರಿ, ನಿರ್ವಿಕಾರಿ ಸ್ವತಃವಾಗಿ ಆಗಿಬಿಡುವಿರಿ. ಒಳ್ಳೆಯದು.

ಇಂದು ಯುವ ವರ್ಗದ ತಂಡವು ಬಂದಿದೆ. ಯುವ ವರ್ಗದವರು ತುಂಬಾ ಬಂದಿದ್ದಾರೆ. ಬಾಪ್‌ದಾದಾರವರು ಯುವ ತಂಡಕ್ಕೆ ಯಾವ ವರದಾನ ನೀಡುತ್ತಾರೆಂದರೆ ಸದಾ ಪ್ರಾಪ್ತಿ ಸಂಪನ್ನರಾಗಿರಿ! ಎಂದು ಒಂದೂ ಖಜಾನೆಯನ್ನು ವ್ಯರ್ಥ ಮಾಡಬೇಡಿರಿ ಪ್ರಾಪ್ತಿ ಸಂಪನ್ನರಾಗಿರಿ ಹಾಗೂ ಪ್ರಾಪ್ತಿ ಮಾಡಿಕೊಳ್ಳಿರಿ. *ಲೌಕಿಕ ಗುರುಜನರು ಧೀರ್ಘಾಯುವುಳ್ಳವರಾಗಿರಿ ಎನ್ನುವ ಆಶೀರ್ವಾದ ಕೊಡುತ್ತಾರೆ. ಆದರೆ ಶರೀರದ ಆಯಸ್ಸು ಎಷ್ಟು ಇದೆಯೋ ಅಷ್ಟೇ ಇರುವುದು ಎಂದು ಬಾಪ್‌ದಾದಾರವರು ಹೇಳುತ್ತಾರೆ. ಆದುದರಿಂದ ಶರೀರದ ಆಯಸ್ಸಿನ ಗಣನೆಯಿಂದ ಆಯುಷ್ಯವಂತರಾಗಿರಿ ಎನ್ನುವ ವರದಾನವನ್ನು ಕೊಡುವುದಿಲ್ಲ. ಆದರೆ ಈ ಬ್ರಾಹ್ಮಣ ಜೀವನದಲ್ಲಿ ಸದಾ ಆಯುಷ್ಮಾನ್ ಭವ! ಎಂಬ ವರದಾನವನ್ನು ಕೊಡುತ್ತಾರೆ. ಏಕೆ? ಬ್ರಾಹ್ಮಣರಿಂದ ದೇವತೆಯಾಗುವಿರಿ. ಆದುದರಿಂದ ಆಯುಷ್ಯವಂತರು ಆಗುವಿರಲ್ಲವೆ,* ಯುವಕರಲ್ಲಿ ಒಂದು ವಿಶೇಷತೆ ಇರುತ್ತದೆ. ನೀವು ಯುವಕರು ನಿಮ್ಮ ವಿಶೇಷತೆಯನ್ನು ತಿಳಿದುಕೊಂಡಿದ್ದೀರಾ. ಯುವಕರಲ್ಲಿ 'ಯಾವ ವಿಶೇಷತೆ ಇರುತ್ತದೆ? (ಏನು ಬಯಸುತ್ತೇವೋ ಅದನ್ನು ಮಾಡಬಲ್ಲೆವು) ಒಳ್ಳೆಯದು. ಮಾಡಬಲ್ಲಿರಾ? ಇದು ಒಳ್ಳೆಯ ವಿಶೇಷತೆಯಾಗಿದೆ. ಯುವಕರಲ್ಲಿ ಪ್ರಪಂಚದ ಗಣನೆಯಿಂದ ಏನು

ಹೇಳುತ್ತಾರೆಂದರೆ ಯುವಕರು ಹಠವನ್ನು ಸಾಧಿಸುವವರು ಎಂದು ಹೇಳುತ್ತಾರೆ. ಆ ಜನರು ತಪ್ಪಾಗಿ ಹೇಳುತ್ತಾರೆ. ಆದರೆ ಇಲ್ಲ ಬ್ರಾಹ್ಮಣ ಯುವಕರು ಹಠವನ್ನು ಸಾಧಿಸುವವರಲ್ಲ, ಆದರೆ ತಮ್ಮ ಪ್ರತಿಜ್ಞೆಯನ್ನು ಪಕ್ಕಾ ಪಾಲನೆ ಮಾಡುವವರಾಗಿದ್ದಾರೆ. ಪ್ರತಿಜ್ಞೆಯನ್ನು ಭಂಗ ಮಾಡುವವರಲ್ಲ. ಅಂತಹ ಯುವಕರಾಗಿದ್ದೀರಾ? ಕೈ ಎತ್ತುವುದೇನೋ ತುಂಬಾ ಸಹಜವಾಗಿದೆ. ಬಾಪ್‌ದಾದಾರವರು ಖುಷಿಯಾಗಿದ್ದಾರೆ. ಕೈ ಎತ್ತುವುದೂ ಸಹ ಧೈರ್ಯದ ಚಿಹ್ನೆಯಾಗಿದೆಯಲ್ಲವೇ. ಆದರೆ ಪ್ರತಿ ದಿನವೂ ಅಮೃತವೇಳೆಯ ಸಮಯದಲ್ಲಿ ತಂದೆಯೊಂದಿಗೆ ಮಾಡಿರುವ ಪ್ರತಿಜ್ಞೆಯಿಂದ, ಈ ಬ್ರಾಹ್ಮಾ ಜೀವನದ ಪ್ರಾಪ್ತಿಯಿಂದ,  ಸೇವೆಯಿಂದ ಎಂದೂ ಸಂಕಲ್ಪದಲ್ಲಿಯೂ ಸಹ ಹಿಂದೆ ಸರಿಯುವುದಿಲ್ಲ ಎಂದು ನಿಶ್ಚಯ ಮಾಡಿಕೊಳ್ಳಿರಿ. ಈ ಧೈರ್ಯವನ್ನು ಪ್ರತಿಜ್ಞೆಯನ್ನು ಪ್ರತಿದಿನವೂ ನೆನಪು ಮಾಡಿಕೊಳ್ಳಿರಿ ಹಾಗೂ ನಾವು ಏನು ಈ ಧೈರ್ಯವನ್ನು ಇಟ್ಟುಕೊಂಡೆವೋ. ಸಂಕಲ್ಪ ಮಾಡಿದೆವೋ ಅದು ಪ್ರತ್ಯಕ್ಷ ರೂಪದಲ್ಲಿ ಆಗುತ್ತಾ ಇದೆಯೇ ಎಂದು ಪರಿಶೀಲನೆ ಮಾಡಿಕೊಳ್ಳಿರಿ.

ಸರ್ಕಾರದವರಂತೂ ಮೂರು-ನಾಲ್ಕು ಲಕ್ಷ ಇಂತಹವರು ತಯಾರಾಗಿಬಿಟ್ಟರೂ ಸಾಕು ಎಂದು ಹೇಳುತ್ತಾರೆ. ಬಾಪ್‌ದಾದಾರವರು ಏನು ಹೇಳುತ್ತೇವೆಂದರೆ ಈ ಒಬ್ಬೊಬ್ಬ ಬ್ರಾಹ್ಮಣ ಯುವಕರು ಲಕ್ಷ ಯುವಕರ ಸಮಾನರಾಗಿದ್ದಾರೆ ಎಂದು. ಇಷ್ಟು ಪಕ್ಕಾ ಆಗಿದ್ದೀರಾ? ಅಥವಾ ಮನೆಗೆ ಹೋಗಿ ಬಾಬಾ ಮಾಯೆಯು ಬಂದುಬಿಟ್ಟಿತು, ಹಳೆಯ ಸಂಸ್ಕಾರ ಪ್ರಕಟವಾಗಿಬಿಟ್ಟಿತು. ಸಮಸ್ಯೆಯು ಬಂದುಬಿಟ್ಟಿತು ಎಂದು ಪತ್ರ ಬರೆಯುವವರಾಗಬಾರದು. ಸಮಸ್ಯೆಗಳ ನಿವಾರಣಾ ಸ್ವರೂಪರಾಗಿರಿ. ಸಮಸ್ಯೆಗಳೇನೋ ಬರುತ್ತವೆ ಆದರೆ ನಾನು ಯಾರಾಗಿದ್ದೇನೆ? ಎಂದು ನಿಮ್ಮೊಂದಿಗೆ ಕೇಳಿಕೊಳ್ಳಿರಿ. ನಿವಾರಣಾ ಸ್ವರೂಪ ಆಗಿದ್ದೇನೆಯೋ ಅಥವಾ ಸಮಸ್ಯೆಯಿಂದ ಸೋಲು ಅನುಭವಿಸುವವನಾಗಿದ್ದೇನೆಯೋ ಎಂದು ಕೇಳಿಕೊಳ್ಳಿರಿ. ನಿಮ್ಮೆಲ್ಲರ ಸ್ವಮಾನ ಎನಾಗಿದೆ' ವಿಜಯಶಾಲೀ ರತ್ನವೋ ಅಥವಾ ಪರಾಜಯ ಹೊಂದುವ ರತ್ನವಾಗಿದ್ದೀರೋ? ವಿಜಯಶಾಲಿ ರತ್ನವಾಗಿದ್ದೀರಿ. ಬ್ರಾಹ್ಮಣ ಜನ್ಮತಃ ಬಾಪ್‌ದಾದಾರವರು ಪ್ರತಿಯೊಬ್ಬ ಬ್ರಾಹ್ಮಣನ ಮಸ್ತಕದಲ್ಲಿ ವಿಜಯದ ತಿಲಕವನ್ನು ಅಮರವಾಗಿ ಇಟ್ಟುಬಿಟ್ಟಿದ್ದೇವೆ. ಆದುದರಿಂದ ನೀವು ಅಮರಭವ!ದ ವರದಾನಿಯಾಗಿದ್ದೀರಿ. ಈಗ ನಿಮ್ಮೊಂದಿಗೆ ಈ ಪ್ರತಿಜ್ಞೆಯನ್ನು  ಮಾಡಿಕೊಳ್ಳಿರಿ. *ಸುಮ್ಮನೆ ಪ್ರತಿಜ್ಞೆ ಎಂದು ಹೇಳಿದರೆ ಎಲ್ಲರೂ ಮಾಡಿಬಿಡುತ್ತೀರಿ. ಆದರೆ ನಿಮ್ಮ ಮನಸ್ಸಿನಲ್ಲಿ ನಿಮ್ಮೊಂದಿಗೆ ಏನು ಪ್ರತಿಜ್ಞೆ ಮಾಡಿಕೊಳ್ಳಬೇಕೆಂದರೆ – ಎಂದಿಗೂ ಸಂಸ್ಕಾರಗಳ ವಶವಾಗುವುದಿಲ್ಲ ಎಂದು. ತಂದೆಯ ಸಂಸ್ಕಾರಗಳು ಎನಾಗಿವೆಯೋ ಅವು ಬ್ರಾಹ್ಮಣ ಅತ್ಮರಾದ ನನ್ನ ಸಂಸ್ಕಾರಗಳಾಗಿವೆ. ದ್ವಾಪರ, ಕಲಿಯುಗದ ಸಂಸ್ಕಾರಗಳು ಏನಿವೆಯೋ ಅವು ನನ್ನ ಸಂಸ್ಕಾರಗಳಲ್ಲ ಏಕೆಂದರೆ ಅವುಗಳು ತಂದೆಯ ಸಂಸ್ಕಾರಗಳಲ್ಲ ಎಂದು ತಿಳಿಯಬೇಕು. ಈ ತಮೋಗುಣಿ ಸಂಸ್ಕಾರಗಳು ಬ್ರಾಹ್ಮಣರ ಸಂಸ್ಕಾರಗಳಾಗಿವೆಯೇ? ಆಗಿಲ್ಲವಲ್ಲವೇ. ಆದುದರಿಂದ ನೀವು ಯಾರಾಗಿದ್ದೀರೀ?' ಬ್ರಾಹ್ಮಣರಾಗಿದ್ದೀರಿ ಅಲ್ಲವೇ.*

ಬಾಪ್‌ದಾದಾರವರಿಗೂ ಸಹ ಯುವಕ ತಂಡದವರ ಬಗ್ಗೆ ಹೆಮ್ಮೆ ಇದೆ. ನೋಡಿರಿ, ದಾದಿಯರಿಗೂ ಸಹ ಯುವಕರ ಬಗ್ಗೆ ಅಭಿಮಾನವಿದೆ. ದಾದೀಜಿಯವರಿಗೆ ಯುವಕರೊಂದಿಗೆ ಪ್ರೀತಿಯಿದೆಯಲ್ಲವೇ. ವಿಶೇಷ ಪ್ರೀತಿ ಇದೆ. ಕುಮಾರರು ಸುಕುಮಾರರಾಗಿದ್ದೀರಾ. ಕೇವಲ ಕುಮಾರರಲ್ಲ, ಸುಕುಮಾರರಾಗಿದ್ದೀರಿ. ಒಬ್ಬೊಬ್ಬ ಕುಮಾರರು ವಿಶ್ವದ

ಕುಮಾರರನ್ನು ಪರಿವರ್ತನೆ ಮಾಡುವವರಾಗಿದ್ದೀರಿ. ಒಳ್ಳೆಯದು. ಕುಮಾರರಿಗೆ ಒಂದು ಕೆಲಸವನ್ನು ಕೊಡೋಣವೇ? ಮಾಡುವ ಧೈರ್ಯವಿದೆಯೇ? ಮಾಡಬೇಕಾಗುತ್ತದೆ. ಕುಮಾರಿಯರು ಮಾಡುವಿರಾ?

ಹಾಗಾದರೆ ನಿಮಗೆ ಒಂದು ಕಾರ್ಯವನ್ನು ಕೊಡುತ್ತೇನೆ. ಗಮನವಿಟ್ಟು ಕೇಳಿರಿ. ಮುಂದಿನ ಮಿಲನದ ಸೀಜನ್ ಯಾವುದಾದರೂ ಇರುವುದೋ, ಆ ಮುಂದಿನ ಸೀಜನ್ನಿನಲ್ಲಿ ಇಂತಹದ್ದೇ ಕುಮಾರರ ವಿಶೇಷ ಕಾರ್ಯಕ್ರಮವನ್ನು ಇಟ್ಟುಕೊಳ್ಳುವೆವು. ಆದರೆ... ಆದರೆ ಎನ್ನುವುದೂ ಸಹ ಇದೆ. ಜಾಸ್ತಿ ಕಾರ್ಯವನ್ನು ಕೊಡುವುದಿಲ್ಲ. ಒಬ್ಬೊಬ್ಬ ಕುಮಾರರು ಹತ್ತು-ಹತ್ತು ಕುಮಾರರ ಚಿಕ್ಕದಾದ ಕೈ ಕಡಗವನ್ನು ತಯಾರುಮಾಡಿಕೊಂಡು ಕರೆತನ್ನಿರಿ. ಕೈಯಲ್ಲಿ ಕಡಗವು ಬೀಳುತ್ತದೆಯಲ್ಲವೆ. ಬ್ರಹ್ಮಾಬಾಬಾರವರಿಗೂ ಸಹ ಕೈಯಲ್ಲಿ ಹೂಗಳ ಕಡಗವನ್ನು ಹಾಕುತ್ತಾರೆ. ಹಾಗೆಯೇ ಒಬ್ಬೊಬ್ಬ ಕುಮಾರರು ಕಚ್ಚಾ ಕುಮಾರರನ್ನು ಕರೆತರಬಾರದು. ಪಕ್ಕಾ ಕುಮಾರರನ್ನು ಕರೆತರಬೇಕು. ಮದುಬನದವರಂತೂ ಬಂದರು. ಆದರೆ ಮನೆಗೆ ಹಿಂತಿರುಗಿ ಹೋದಮೇಲೆ ಪರಿವರ್ತನೆ ಆಗಿಬಿಟ್ಟರು ಎಂಬಂತೆ ಆಗಬಾರದು. ಎಂತಹ ಪಕ್ಕಾ ಕುಮಾರರನ್ನು ಕರೆತರಬೇಕೆಂದರೆ ಅವರನ್ನು ಬಾಪ್‌ದಾದಾರವರು ನೋಡಿ  ಭೇಷ್ ಕುಮಾರರೆ ಭೇಷ್! ಎಂದು ಹೊಗಳುವಂತಿರಬೇಕು. ಈ ರೀತಿ ಮಾಡುವುದಕ್ಕೆ ತಯಾರಾಗಿದ್ದೀರಾ? ಹೀಗೆ ಮಾಡುವಿರಾ? ಸ್ವಲ್ಪ ವಿಚಾರ ಮಾಡಿರಿ. ಸುಮ್ಮನೆ ಕೈ ಎತ್ತಿ ಬಿಡಬೇಡಿರಿ. ಮಾಡಬೇಕಾಗುವುದು. ಹಾಗೂ ಅವರನ್ನು ತಯಾರು ಮಾಡಬೇಕಾಗುವುದು, ಡಬಲ್ ವಿದೇಶೀಯರು ಮಾಡುವಿರಾ? ಡಬಲ್ ವಿದೇಶದಿಂದ ಬಂದಿರುವ ಕುಮಾರರು ಕೈಯನ್ನು ಎತ್ತಿರಿ. ನೀವೂ ಸಹ ಹತ್ತು ಪಕ್ಕಾ ಕುಮಾರರನ್ನು ಕರೆತರುವಿರಲ್ಲವೆ? ವಿದೇಶೀಯರೂ ಸಹ ಕರೆತರುವರು. ಭಾರತೀಯರೂ ಸಹ ಕರೆತರುವರು. ಆಮೇಲೆ ಯಾರು ಫಸ್ಟ್ ಕ್ಲಾಸ್  ಗುಣಮಟ್ಟದವರನ್ನು ಕರೆತರುವರೋ ಅವರಿಗೆ ಬಹುಮಾನವನ್ನು ಕೊಡುವರು. ಬಹುಮಾನವೂ ಸಹ ಉನ್ನತವಾದುದನ್ನು ಕೊಡುವದು. ಕಳಪೆಯಾಗಿರುವುದನ್ನು ಕೊಡುವುದಿಲ್ಲ. ಕುಮಾರರೊಂದಿಗೆ ಪ್ರೀತಿ ಇದೆಯಲ್ಲವೆ. ಒಂದುವೇಳೆ ಸರ್ಕಾರದವರಿಗೆ ಸಕಾರಾತ್ಮಕ ಕರ್ಮವನ್ನು ಮಾಡುವ ಅಧಿಕ ಸಂಖ್ಯೆಯ ಕುಮಾರರು ದೊರೆತುಬಿಟ್ಟರೆ ಅವರು ಎಷ್ಟೊಂದು ಖುಷಿಪಡುವರು. ಹಾಗೇನಾದರೂ ನೀವು ಹತ್ತು-ಹತ್ತು ಕುಮಾರರನ್ನು ಕರೆತಂದರೆ ಇಡೀ ಹಾಲ್ ಕುಮಾರರಿಂದ ತುಂಬಿ ಹೋಗುವುದು ಆ ಕುಮಾರರನ್ನು ನೋಡಿರಿ ಎಂದು ಸರ್ಕಾರದವರನ್ನು ಕರೆಸುವರು. ಆದರೆ ನೀವು ಕುಮಾರರನ್ನು ತಯಾರು ಮಾಡಿ ಕರೆತರಬೇಕಾಗುತ್ತದೆ. ಒಂದುವೇಳೆ ನಿಮ್ಮ ಸ್ಥಿತಿ, ಲಕ್ಷ್ಯ ಹಾಗೂ ಲಕ್ಷಣವನ್ನು ಸಮಾನವಾಗಿ ಇಟ್ಟುಕೊಂಡರೆ ಸೇವೆಯಲ್ಲಿ ಸಫಲತೆ ಆಗುವುದೊ ಅಥವಾ ಆಗುವುದಿಲ್ಲವೋ ಎಂಬ ಸಂಕಲ್ಪವೂ ಸಹ ಉತ್ಪನ್ನವಾಗುವುದಿಲ್ಲ. ಆಗಿಯೇಬಿಟ್ಟಿದೆ. ಕೇವಲ ನೀವು ನಿಮಿತ್ತರಾಗಬೇಕಾಗುತ್ತದೆ. ಈ ಪ್ರತಿಜ್ಞೆಯನ್ನು ಸದಾ ಪುನರಾವೃತ್ತಿ ಮಾಡುತ್ತಾ ಇರಿ, ಕಮಾಲ್ ಅಂತೂ ಮಾಡಲೇಬೇಕು. ಒಳ್ಳೆಯದು.

ಡಬಲ್ ವಿದೇಶಿಯರು ಸಹ ಬಂದಿದ್ದಾರೆ ಬಾಪ್‌ದಾದಾ ಹೇಳುತ್ತಿದ್ದಾರೆ ಡಬಲ್ ವಿದೇಶಿಯರು ಬಾಪ್‌ದಾದಾರವರ ಒಂದು ಟೈಟಲ್ ಅನ್ನು ಪ್ರತ್ಯಕ್ಷದಲ್ಲಿ ತಂದಿದ್ದಾರೆ. ಅದು ಯಾವುದು? (ವಿಶ್ವಕಲ್ಯಾಣಕಾರಿ) ಮೊದಲು ಸ್ಥಾಪನೆಯಾದಾಗ ಭಾರತ ದೇಶದ ಕಲ್ಯಾಣಕಾರಿಯಾಗಿದ್ದರು.  ಆದರೆ ಡಬಲ್ ವಿದೇಶರು ಯಾವಾಗ ಬ್ರಾಹ್ಮಣಾತ್ಮರಾದರೋ ಆಗಿನಿಂದ ಬಾಬಾ ರವರ ವಿಶ್ವಕಲ್ಯಾಣಕಾರಿ ಎಂಬ ಟೈಟಲ್ ಪ್ರಾಕ್ಟಿಕಲ್ ಆಗಿ ಪ್ರತ್ಯಕ್ಷವಾಯಿತು. ಆದ್ದರಿಂದಲೇ

ಬಾಪ್‌ದಾದಾರವರಿಗೆ ಡಬಲ್ ವಿದೇಶಿಯರ ಬಗ್ಗೆಯೂ ಹೆಮ್ಮೆಯಾಗಿದೆ. ಡಬಲ್ ವಿದೇಶಿಯರಲ್ಲಿ ಯಾವ ಕೋಣೆಯು ಉಳಿಯಬಾರದು ಎಂಬ ಒಂದು ದೃಢತೆ ಇದೆ.

(ಮುರಳಿಯ ಮಧ್ಯದಲ್ಲಿ ಆಕಸ್ಮಾತ್ತಾಗಿ ಇಬ್ಬರು ಕುಮಾರರು ಬಾಪ್‌ದಾದಾರವರ ಎದುರಿನಲ್ಲಿ ವೇದಿಕೆಯ ಮೇಲೆ ಬಂದುಬಿಟ್ಟರು. ಅವರನ್ನು ಅಲ್ಲಿಂದ ಕರೆದುಕೊಂಡು ಹೋಗಲಾಯಿತು). ಒಳ್ಳೆಯದು. ಈ ನಾಟಕವೆಂಬ ಆಟದಲ್ಲಿ ಮತ್ತೊಂದು ಆಟವನ್ನು ನೋಡಿದಿರಿ. ಈಗ ಬಾಪ್‌ದಾದಾರವರು ಸಾಕ್ಷಿಯಾಗಿ ನಾಟಕವನ್ನು ನೋಡುವರು. ಮನೋರಂಜನೆ ಎನಿಸಿತು. ಈಗ ಒಂದು ಸೆಕೆಂಡಿನಲ್ಲಿ ಒಂದೇ ಸಲ ದೇಹದಿಂದ ಅತೀತವಾದ ಶಕ್ತಿಪೂರ್ಣ ಆತ್ಮಿಕ ರೂಪದಲ್ಲಿ ಸ್ಥಿತರಾಗಬಲ್ಲಿರಾ? ಫುಲ್ ಸ್ಟಾಪ್ ಹಾಕಿಬಿಡಿ. (ಬಾಪ್ ದಾದಾ ತುಂಬಾ ಪವರ್ ಫುಲ್ ಡ್ರಿಲ್ ಮಾಡಿಸಿದರು). ಒಳ್ಳೆಯದು. ಇದೇ ಅಭ್ಯಾಸವನ್ನು ಮಧ್ಯ ಮಧ್ಯದಲ್ಲಿ ಮಾಡಬೇಕು. ಈಗ ತಾನೇ ಕಾರ್ಯದಲ್ಲಿ ಬಂದಿದ್ದೀರಿ, ಇದೀಗಲೇ ಕಾರ್ಯದಿಂದ ಅತೀತರಾಗಿ ಸಾಕಾರಿಯಿಂದ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗಿಬಿಡಬೇಕು. ಹಾಗೆಯೇ ಈ ಒಂದು ಅನುಭವವನ್ನು ನೋಡಿದಿರಿ. ಯಾವುದಾದರೂ ಸಮಸ್ಯೆಯು ಬಂದರೆ ಇದೇ ರೀತಿ ಒಂದು ಸೆಕೆಂಡಿನಲ್ಲಿ ಸಾಕ್ಷಿ ಸ್ವರೂಪರಾಗಿ ಸಮಸ್ಯೆಯನ್ನು ರಸ್ತೆಯ ಬದಿಯ ದೃಶ್ಯವೆಂದು ತಿಳಿದು. ಬಿರುಗಾಳಿಯನ್ನು ಒಂದು ಉಡುಗೊರೆ ಎಂದು ತಿಳಿದುಕೊಂಡು ಅದರಿಂದ ಪಾರಾಗಿರಿ, , ಅಭ್ಯಾಸ ಇದೆಯಲ್ಲವೇ? ಮುಂದೆ ಹೋದಂತೆ ಇಂತಹ ಅಭ್ಯಾಸದ ಅವಶ್ಯಕತೆಯು ತುಂಬಾ ಉಂಟಾಗುವುದು. ಆಗ ಫುಲ್ ಸ್ಟಾಪ್ ಹಾಕಬೇಕು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಬಾರದು. ಇದು ಏಕೆ ಆಯಿತು, ಹೇಗೆ ಆಯಿತು ಎಂದು ವಿಚಾರ ಮಾಡಬಾರದು. ಆಗಿಹೋಯಿತು ಎಂದು ಪೂರ್ಣ ವಿರಾಮವನ್ನು ಇಟ್ಟುಬಿಡಿ ಹಾಗೂ ತಮ್ಮ ಸಂಪೂರ್ಣ ಶಕ್ತಿಶಾಲಿ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಆಗ ಸಮಸ್ಯೆಯು ಕೆಳಗೆ ಉಳಿದುಬಿಡುವುದು. ನೀವು ಶ್ರೇಷ್ಠ ಸ್ಥಿತಿಯಿಂದ ಸಮಸ್ಯೆಯನ್ನು ರಸ್ತೆ ಬದಿಯ ದೃಶ್ಯವೆಂದು ನೋಡುತ್ತಾ ಇರುವಿರಿ. ಒಳ್ಳೆಯದು. ಯಾರಾದರೇ ದೂರ ಕುಳಿತು ನೋಡುತ್ತಿದ್ದೀರೋ, ಭಾರತ ದೇಶದಲ್ಲಿ ಅಥವಾ ವಿದೇಶದಲ್ಲಿ ಕೇಳುತ್ತಿದ್ದಾರೆ ಮತ್ತು ನೋಡುತ್ತಿದ್ದಾರೆ ಸಹ ಹಾಗೆ ದೂರವಾಗಿದ್ದರೂ ಮನಸ್ಸಿನಿಂದ ಸಮೀಪವಾಗಿರುವ ಮಕ್ಕಳಿಗೆ ಮೊದಲು ಬಾಪ್‌ದಾದಾ ಪ್ರಿಯ ಸ್ಮೃತಿಗಳನ್ನು ಕೊಡುತ್ತಿದ್ದಾರೆ. ಏಕೆಂದರೆ ಯಾರಿಗೆ ಯಾವ ಸಮಯವಾಗುತ್ತಿದೆ ಎಂದು ಬಾಪ್‌ದಾದಾರವರಿಗೆ ತಿಳಿದಿದೆ. ಆದರೂ ರಾತ್ರಿಯನ್ನು ಹಗಲನ್ನಾಗಿ ಮಾಡಿಕೊಂಡು, ಹಗಲನ್ನು ರಾತ್ರಿಯನ್ನಾಗಿ ಮಾಡಿಕೊಂಡು ಕುಳಿತುಕೊಂಡಿದ್ದೀರಿ. ಇದು ಮಕ್ಕಳು ಮತ್ತು ತಂದೆಯ ಪ್ರೀತಿ ಮತ್ತು ಮಧ್ಯದಲ್ಲಿ ಬಾಪ್‌ದಾದಾರವರು ವಿಜ್ಞಾನದ ಮಕ್ಕಳಿಗೆ (ಸೈನ್ಸ ) ಸಹ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಏಕೆಂದರೆ ಮಕ್ಕಳಾದ ನಿಮಗಾಗಿ ಈ ಸೈನ್ಸ್ ಸಾಧನಗಳನ್ನು ತಯಾರು ಮಾಡಿದ್ದಾರೆ. ಆದ್ದರಿಂದಲೇ ಬಾಪ್‌ದಾದಾ ಆ ಮಕ್ಕಳಿಗೂ ಶುಭಾಶಯಗಳನ್ನು ಕೊಡುತ್ತಿದ್ದಾರೆ. ನಿಮ್ಮ ಸಲುವಾಗಿಯೇ ಈ ಸಾಧನಗಳೆಲ್ಲವನ್ನು 100 ವರ್ಷಗಳಲ್ಲಿ ತಯಾರು ಆಗಿವೆ ಆದ್ದರಿಂದ ಸೈನ್ಸ್ ಅವರ ಅದ್ಭುತ ಅಲ್ಲವೇ! ಅವರಿಗೆ ಧನ್ಯವಾದಗಳು ಅಲ್ಲವೇ! ಒಳ್ಳೆಯದು.

*ನಾಲ್ಕೂ ಕಡೆಯ ಸರ್ವ ಖಜಾನೆಗಳಿಂದ ಸಂಪನ್ನರಾಗಿರುವ ಆತ್ಮರಿಗೆ, ಸದಾ ಪ್ರತೀ ಸಮಯದಲ್ಲಿಯೂ ಪ್ರಾಪ್ತಿಗಳಿಂದ ಸಂಪನ್ನ ಮುಗುಳ್ನಗುತ್ತಿರುವ, ಹರ್ಷಿತರಾಗಿರುವ ಅತ್ಮರಿಗೆ, ಸದಾ ತಂದೆಯೊಂದಿಗೆ ಮಾಡಿರುವ ಪ್ರತಿಜ್ಞೆಯನ್ನು ಜೀವನದಲ್ಲಿ ಪ್ರತ್ಯಕ್ಷಗೊಳಿಸುವ ಜ್ಞಾನಿ ಆತ್ಮರಿಗೆ, ಯೋಗೀ ಆತ್ಮರಾದ ಮಕ್ಕಳಿಗೆ, ಸದಾ ಲಕ್ಷ್ಯ ಹಾಗು ಲಕ್ಷಣಗಳನ್ನು

ಸಮಾನ ಮಾಡಿಕೊಳ್ಳುವ ತಂದೆಯ ಸಮಾನ ಆತ್ಮರಿಗೆ, ಸದಾ ಪ್ರತೀ ಸಮಯದಲ್ಲಿ ಪ್ರತೀ ಖಜಾನೆಗಳನ್ನು ಸಂಗ್ರಹ ಹಾಗೂ ಪೂರ್ಣವಿರಾಮ ಇಡುವ ತೀವ್ರ ಪುರುಷಾರ್ಥಿ ಶ್ರೇಷ್ಠ ಆತ್ಮರಿಗೆ, ಬಾಪ್‌ದಾದಾರವರ ನೆನಪು ಪ್ರೀತಿ, ಹೃದಯರಾಮನ ಹೃದಯಪೂರ್ವಕವಾದ ನೆನಪು, ಪ್ರೀತಿ ಹಾಗೂ ನಮಸ್ತೆ.*

ರಿವೈಸ್ ಕೋರ್ಸ್ 03-02-2002.
*ಲಕ್ಷ್ಯ ಹಾಗೂ ಲಕ್ಷಣಗಳನ್ನು ಸಮಾನ ಮಾಡಿಕೊಳ್ಳಿರಿ, ಸರ್ವ ಖಜಾನೆಗಳಿಂದ ಸಂಪನ್ನರಾಗಿರಿ.*

ಸಮಯದ ವೇಗವನ್ನನುಸರಿಸಿ ಈಗ ಯಾವಾಗಲೋ, ಎನ್ನಬೇಡಿರಿ ಈಗಲೇ ಎನ್ನಿರಿ. ಆಗಿಬಿಡುತ್ತದೆ, ಮಾಡುತ್ತೇವೆ, ಆಗಲೇಬೇಕು... ಹೀಗೆ ಯೋಚಿಸಬೇಡಿರಿ. ಆಗಲೇಬೇಕು ಅಲ್ಲ, ಈಗಲೇ ಮಾಡಲೇಬೇಕು. ಸಮಯದ ಗತಿಯು ತೀವ್ರವಾಗುತ್ತಿದೆ ಆದ್ದರಿಂದ ಯಾವ ಲಕ್ಷ್ಯವನ್ನಾದರೆ ಇಟ್ಟುಕೊಂಡಿದ್ದಿರೋ.. ತಂದೆಯ ಸಮಾನರಾಗಬೇಕು, ಫುಲ್ ಪಾಸ್ ಆಗಬೇಕು, 16 ಕಲಾ ಸಂಪನ್ನರಾಗಬೇಕು ಎಂದು ಈ ಲಕ್ಷ್ಯ ಮತ್ತು ಪ್ರತ್ಯಕ್ಷದ ಲಕ್ಷಣಗಳು ಸಮಾನವಾಗಿರಬೇಕು. ಯಾವಾಗ ಲಕ್ಷ್ಯ ಮತ್ತು ಲಕ್ಷಣಗಳಲ್ಲಿ ಸಮಾನತೆ ಇರುತ್ತದೆಯೋ ಆಗಲೇ ಸಹಜವಾಗಿ ಬ್ರಹ್ಮಾ ತಂದೆಯ ಸಮಾನರಾಗುತ್ತೀರಿ. ಆದ್ದರಿಂದ ಪರಿಶೀಲನೆ ಮಾಡಿಕೊಳ್ಳಿರಿ ಆಗಿಬಿಡುತ್ತದೆ... ತಯಾರಾಗಿಬಿಟ್ಟಿದ್ದೇವೆ..ಇವು ಸೋಮಾರಿತನದ ಮಾತುಗಳು. ಏನನ್ನು ಮಾಡಬೇಕೆಂದುಕೊಂಡರೂ, ಹೇಗೆ ತಯಾರು ಆಗಬೇಕೆಂದುಕೊಂಡರೂ, ಯಾವ ಲಕ್ಷ್ಯವಾದರೆ ಇದೆಯೋ ಅದನ್ನು ಈಗಿನಿಂದಲೇ ಮಾಡಬೇಕು, ತಯಾರಾಗಬೇಕು. ಎನ್ನುತ್ತಾ ಸರ್ವಖಜಾನೆಗಳಿಗೆ ಮಾಲಿಕನಾದ ತಂದೆಯು ಖಜಾನೆಗಳಿಂದ ಸಂಪನ್ನವಾಗಿರುವ ತನ್ನ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*
ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವ ಖಜಾನೆಗಳಿಂದ ಸಂಪನ್ನವಾಗಿ, ಪ್ರಾಪ್ತಿ ಸ್ವರೂಪವಾಗಿ, ತೃಪ್ತಿಯಾಗಿ ಇದ್ದೇನೆ.

2. ನನಗೆ ಖಜಾನೆಗಳು ಈಗಲೂ ಲಭಿಸಿದೆ ಮತ್ತು ಭವಿಷ್ಯದಲ್ಲಿ ಅನೇಕ ಜನ್ಮಗಳು ನನ್ನ ಜೊತೆಯೇ ಇರುತ್ತವೆ.

3. ನಾನು ಜ್ಞಾನ ಖಜಾನೆಯಿಂದ ಮುಕ್ತಿ ಮತ್ತು ಜೀವನ್ ಮುಕ್ತಿಯ ಅನುಭವವನ್ನು ಮಾಡಿಕೊಳ್ಳುತ್ತಿದ್ದೇನೆ.

4. ನಾನು ಜೀವನದಲ್ಲಿ ಹಳೆಯ ಪ್ರಪಂಚದಿಂದ, ತಮೊಗುಡಿ ಪ್ರಪಂಚದಲ್ಲಿ ಇರುತ್ತಲೂ, ದುಃಖ, ಚಿಂತೆ, ಅಶಾಂತಿ, ಹಳೆಯ ಬಂಧನಗಳು, ವ್ಯರ್ಥ ಸಂಕಲ್ಪಗಳ ಬಿರುಗಾಳಿಯಿಂದ ಕಮಲ ಪುಷ್ಪ ಸಮಾನವಾಗಿ ಅತೀತ ಮತ್ತು ಮುಕ್ತನಾಗಿ ಮತ್ತು ತಂದೆಗೆ ಪ್ರಿಯವಾಗಿ ಇದ್ದೇನೆ.

5. ನಾನು ಮಾಸ್ಟರ್ ಸರ್ವಶಕ್ತಿವಂತನು.

6. ನಾನು ಯೋಗ ಬಲದಿಂದ ಸರ್ವ ಶಕ್ತಿಗಳ ಖಜಾನೆಯನ್ನು ಜಮಾ ಮಾಡಿಕೊಂಡು ಸಂಪನ್ನವಾಗಿ, ಪ್ರಾಪ್ತಿ ಸ್ವರೂಪವಾಗಿ ಇದ್ದೇನೆ.

7. ನಾನು ಯಾವ ಶಕ್ತಿಯ ಪ್ರತಿಶತದಲ್ಲಿ ಲೋಪವನ್ನು ಇಟ್ಟುಕೊಳ್ಳುವುದಿಲ್ಲ. ಎಂಬ ದೃಢ ನಿಶ್ಚಯದಲ್ಲಿ ತಂದೆಯೊಂದಿಗೆ ಮತ್ತೆ ಸ್ವಯಂ ನೊಂದಿಗೆ ಪ್ರತಿಜ್ಞೆ ಮಾಡಿ ಫುಲ್ ಪಾಸ್ ಆಗಿರುವ ಸೂರ್ಯವಂಶಜನು.

8. ನನ್ನ ತಂದೆಯ ಸಮಾನವಾಗಿ ಫುಲ್ ಪಾಸ್, 16 ಕಲಾ ಸಂಪನ್ನ ರಾಗಬೇಕು ಎಂಬ ಲಕ್ಷ್ಯ ಮತ್ತು ಪ್ರತ್ಯಕ್ಷದಲ್ಲಿನ ಲಕ್ಷಣಗಳು ಸಮಾನವಾಗಿ ಇವೆ.

9. ನಾನು ಏನು ಮಾಡಬೇಕೆಂದುಕೊಂಡರೂ ಹೇಗೆ ತಯಾರಾಗಬೇಕೆಂದುಕೊಂಡರೂ ಯಾವ ಲಕ್ಷ್ಯವಿದೆಯೋ ಅದನ್ನು ಈಗಲೇ ಮಾಡುತ್ತೇನೆ, ತಯಾರಾಗುತ್ತಿದ್ದೇನೆ.

10. ನಾನು ಧಾರಣೆಯ ಖಜಾನೆಯಿಂದ ಸರ್ವಗುಣಗಳನ್ನು ಜಮಾ ಮಾಡಿಕೊಂಡಿದ್ದೇನೆ.

11. ನಾನು ಯಥಾರ್ಥ ಸೇವೆಯ (ಮನಸಾ, ವಾಚಾ, ಕರ್ಮಣಾ) ಮೂಲಕ ಸ್ವಯಂನ್ನು ಖುಷಿಯಾಗಿ ಅರಳಿರುವ ಆತ್ಮಿಕ ಗುಲಾಬಿಯಂತೆ ಖುಷಿಯ ಉಯ್ಯಾಲೆಯಲ್ಲಿ ತೂಗುತ್ತಾ ಇರುವಂತೆ ಅನುಭವ ಮಾಡಿಕೊಳ್ಳುತ್ತಿದ್ದೇನೆ ಮತ್ತು ನನ್ನ ಖುಷಿಯ ಪ್ರಭಾವ ಸೇವಸ್ಥಾನದ ಮೇಲೆ, ಸೇವಾ ಸಹಯೋಗಿಗಳ ಮೇಲೆ, ಯಾವ ಆತ್ಮರಿಗೆ ಸೇವೆಯನ್ನು ಮಾಡುತ್ತಿದ್ದೇನೆಯೋ ಆ ಆತ್ಮರ ವಾಯುಮಂಡಲವು ಖುಷಿಯಾಗುವಂತೆ ಇದೆ.

12. ನಾನು ಸಂಬಂಧ ಸಂಪರ್ಕಗಳಿಂದ ಆಶೀರ್ವಾದಗಳನ್ನು ಪಡೆದು ಸ್ವಯಂ ಮತ್ತು ಯಾರಿಗೆ ಸೇವೆಯನ್ನು ಮಾಡಿದ್ದೇನೆಯೋ ಅವರು ಸಹ ಡಬಲ್ ಲೈಟ್ ಆಗುವ ಅನುಭವವನ್ನು ಮಾಡಿದ್ದಾರೆ.

13. ನಾನು ಎಂಬ ಮಾತು ಬಂದಾಗಲೆಲ್ಲ ನಾನು ನಿರಾಕಾರಿ ಆತ್ಮ ಸಾಕಾರದಲ್ಲಿ ಸೇವೆಗಾಗಿ ಅವತರಿಸಿದ್ದೇನೆ ಎಂಬ ಸ್ಮೃತಿಯನ್ನಿಟ್ಟುಕೊಂಡಿದ್ದೇನೆ.

14. ನಾನು ನಿರಾಕಾರಿ ಆತ್ಮ ಎಂಬ ಸ್ಮೃತಿಯಿಂದ ನಿರಹಂಕಾರಿಯಾಗಿ ನಿರ್ವಿಕಾರಿಯಾಗಿದ್ದೇನೆ.

15. ನಾನು ಸದಾ ಸಂಪನ್ನವಾಗಿ ಇದ್ದೇನೆ.

16. ನಾನು ಬ್ರಾಹ್ಮಣ ಜೀವನದಲ್ಲಿ ಸದಾ ಆಯುಷ್ಮಾನ್ ಭವ! ಎಂಬ ವರದಾನದ ವರದಾನಿಯಾಗಿದ್ದೇನೆ.

17. ನನ್ನ ಪ್ರತಿಜ್ಞೆ ಪಕ್ಕಾ ಆಗಿರುವ ಬ್ರಾಹ್ಮಣನಾಗಿದ್ದೇನೆ.

18. ನಾನು ಬ್ರಾಹ್ಮಣ ಜೀವನದ ಪ್ರಾಪ್ತಿಗಳಿಂದ, ಸೇವೆಯಿಂದ ಯಾವಾಗಲೂ ಸಂಕಲ್ಪದಲ್ಲಿಯೂ ತೊಲಗುವುದಿಲ್ಲ ಎಂಬ ಧೈರ್ಯವನ್ನು, ಪ್ರತಿಜ್ಞೆಯನ್ನು ದಿನವಿಡೀ ರಿಪೀಟ್ ಮಾಡುತ್ತಿದ್ದೇನೆ ಮತ್ತು ಧೈರ್ಯವಿಟ್ಟಿರುವುದರ ಬಗ್ಗೆ ಸಂಕಲ್ಪ ಮಾಡಿರುವುದರ ಬಗ್ಗೆ ಪ್ರತ್ಯಕ್ಷದಲ್ಲಿ ಆಗುತ್ತಿದೆಯೇ ಎಂಬ ಪರಿಶೀಲನೆಯನ್ನು ಮಾಡಿಕೊಳ್ಳುತ್ತಿದ್ದೇನೆ.

19. ನಾನು ಸಮಾಧಾನ ಸ್ವರೂಪ.

20. ನನಗೆ ಜನ್ಮದಿಂದಲೇ ಬಾಪ್‌ದಾದಾ ನನ್ನ ಮಸ್ತಕದಲ್ಲಿ ವಿಜಯೀ ತಿಲಕವನ್ನು ಇಟ್ಟಿರುವ ವಿಜಯೀ ರತ್ನ.

21. ನಾನು ಅಮರ ಭವ!ದ ವರದಾನೀ ಸ್ವರೂಪ.

22. ತಂದೆಯ ಸಂಸ್ಕಾರಗಳೇ ಬ್ರಾಹ್ಮಣಾತ್ಮನಾದ ನನ್ನ ಸಂಸ್ಕಾರಗಳಾಗಿವೆ.

23. ನನ್ನ ಸ್ಥಿತಿಯನ್ನು ಮತ್ತು ಲಕ್ಷ್ಯ ಲಕ್ಷಣಗಳನ್ನು ಸಮಾನವಾಗಿಸಿಕೊಂಡು ಸೇವೆಯಲ್ಲಿ ಸಫಲತೆಯನ್ನು ಪಡೆದಿದ್ದೇನೆ.

24. ನಾನು ಒಂದು ಕ್ಷಣದಲ್ಲಿ ದೇಹಕ್ಕೆ ಅತೀತವಾಗಿ ಶಕ್ತಿಶಾಲಿ ಆತ್ಮಿಕ ಸ್ವರೂಪದಲ್ಲಿ ಸ್ಥಿತವಾಗುವ ಅಭ್ಯಾಸವನ್ನು ಮಧ್ಯಮಧ್ಯದಲ್ಲಿ ಮಾಡುತ್ತಿದ್ದೇನೆ.

25. ನನಗೆ ಯಾವ ಸಮಸ್ಯೆ ಬಂದರೂ ಇದು ಏಕೆ ಆಗಿದೆ, ಇದು ಹೇಗೆ ಆಗಿದೆ, ಎಂಬ ಪ್ರಶ್ನಾರ್ಥಕವನ್ನು ಸಮಾಪ್ತಿ ಮಾಡಿ ಫುಲ್ ಸ್ಟಾಪ್ ಇಟ್ಟು ಶಕ್ತಿಶಾಲಿ ಸ್ಥಿತಿಯಲ್ಲಿ ಸ್ಥಿತವಾಗಿ ಒಂದು ಕ್ಷಣದಲ್ಲಿ ಸಾಕ್ಷಿ ದೃಷ್ಟಿಯಿಂದ ಸಮಸ್ಯೆಯನ್ನು ಸೈಡ್ ಸೀನ್ (ಮಾರ್ಗದ ಮಧ್ಯದ ದೃಶ್ಯದಂತೆ) ಭಾವಿಸಿ, ಬಿರುಗಾಳಿಯನ್ನು ಕಾಣಿಕೆಯಂತೆ ಭಾವಿಸಿ ದಾಟಿಬಿಡುತ್ತಿದ್ದೇನೆ.